ಆತ್ಮೀಯರೇ,

ದಿನಾಂಕ: 16/03/2018 ರಂದು ಖುಷಿ ಪರಿಸರ ಕುಮಟಾ, ಅಳ್ವೆದಂಡೆಯ ಸಮುದ್ರ ತೀರದಲ್ಲಿ ಮಧ್ಯಾಹ್ನ 3:00 ರಿಂದ ಸಂಜೆ 4:30 ಗಂಟೆಯವರೆಗೆ **"ಸ್ವಚ್ಛ ಸಮುದ್ರ ಸ್ವಸ್ಥ ಕರಾವಳಿ"** ಎಂಬ ವಿನೂತನ ಸಮುದ್ರ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ನಿಮ್ಮ ಸಹಭಾಗಿತ್ವದೊಂದಿಗೆ ನಮ್ಮ ಉದ್ದೇಶವನ್ನು ಇನ್ನೊಂದು ಹೆಜ್ಜೆ ಮುಂದೆ ಕೊಂಡಯ್ಯುವಿರೆಂಬ ದಟ್ಟವಾದ ನಂಬಿಕೆ ನಮಗಿದೆ.

ಇದು ಕುಮಟಾದಲ್ಲಿ ಮೊದಲ ಬಾರಿಗೆ ಆಯೋಜಿಸಲಾಗುತ್ತಿರುವ ಸಮುದ್ರ ಜಾಗೃತಿ ಕಾರ್ಯಕ್ರಮ. ನೀರಿನ ಹರಿವುಗಳಲ್ಲಿ ವಿವೇಚನಾಮುಕ್ತ ತ್ಯಾಜ್ಯ ವಿಲೇವಾರಿಯಿಂದಾಗಿ ಸಮುದ್ರ ಸೇರುವ ಪ್ಲಾಸ್ಟಿಕ್ ತ್ಯಾಜ್ಯದಿಂದ ಉಂಟಾಗುವ ಅನಾಹುತಗಳ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಇದನ್ನು ತಡೆಗಟ್ಟಲು ಬೇಕಾಗುವ ಸಮುದ್ರ ರಕ್ಷಣಾ ನೀತಿಗಳ ಅಳವಡಿಕೆಯ ಅಗತ್ಯತೆಯನ್ನು ಸಾರ್ವಜನಿಕರಿಗೆ ಹಾಗೂ ನೀತಿಗಳ ರಚನೆಯಲ್ಲಿ ಪಾಲ್ಗೊಳ್ಳುವ ಆಡಳಿತ ವರ್ಗಕ್ಕೂ ಮನವರಿಕೆ ಮಾಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಕುಮಟಾ ಪಟ್ಟಣದಲ್ಲಿ ಪುರಸಭೆಯು ತ್ಯಾಜ್ಯವನ್ನು ಸಂಗ್ರಹಿಸುತ್ತಿದ್ದಾಗ್ಯೂ ಬಹಳಷ್ಟು ತ್ಯಾಜ್ಯವನ್ನು ನೀರಿನ ಹರಿವುಗಳಲ್ಲಿ, ಚರಂಡಿಗಳಲ್ಲಿ ಎಸೆಯುವ ವ್ಯವಸ್ಥೆ ಮುಂದುವರಿದಿದೆ. ಈ ತ್ಯಾಜ್ಯ ಕೊನೆಗೆ ಸಮುದ್ರವನ್ನು ತಲುಪುತ್ತದೆ. ನಮ್ಮ ಈ ಉದ್ದೇಶಿತ ಸಮುದ್ರ ಸ್ವಚ್ಛತಾ ಕಾರ್ಯಕ್ರಮದ ಮೂಲಕ ಸ್ಥಳೀಯ ಆಡಳಿತವನ್ನು "ಘನ ಮತ್ತು ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನೀತಿ" ರನ್ನು ಕರಾರುವಕ್ಕಾಗಿ ಪಾಲಿಸುವಂತೆ ಆಗ್ರಹಿಸಲಾಗುವುದು.

ಕುಮಟಾದ ದಯಾನಿಲಯ ವಿಶೇಷ ಶಾಲೆಯು ಈ ಕಾರ್ಯಕ್ರಮದಲ್ಲಿ ಸಹಭಾಗಿತ್ವ ವಹಿಸಿಕೊಂಡಿರುವುದು ಇನ್ನೊಂದು ವಿಶೇಷ. ಈ ಮೂಲಕ ವಿಕಲಚೇತನ ಮಕ್ಕಳು ನಾವು ಸ್ವಚ್ಛಗೊಳಿಸಬಹುದಾದರೆ, ನೀವು ತ್ಯಾಜ್ಯವನ್ನು ಮನಬಂದಂತೆ ಚೆಲ್ಲುವದನ್ನು ನಿಲ್ಲಿಸಲು ಸಾಧ್ಯವಿಲ್ಲವೇ? ಎಂಬ ಗಂಭೀರ ಪ್ರಶ್ನೆಯನ್ನು ಮನಬಂದಂತೆ ಕಸ ಚೆಲ್ಲುವವರಿಗೆ ಕೇಳುತ್ತಿದ್ದಾರೆ.

**ಈ ಸಾಹಸಮಯ ಕೆಲಸದಲ್ಲಿ ನೀವು ಪಾಲ್ಗೊಳ್ಳಿ**

**ಬನ್ನಿ ಪ್ರಭಾವವನ್ನು ಬೀರಿ**

ನಮ್ಮ ಸಹಭಾಗಿಗಳು:
ದಯಾನಿಲಯ ವಿಶೇಷ ಶಾಲೆ ಕುಮಟಾ
ಪುರಸಭೆ ಕುಮಟಾ
ಪುರಸಭಾ ವ್ಯಾಯಾಮ ಶಾಲೆ ಕುಮಟಾ
ಎನ್.ಎಸ್.ಎಸ್. ಘಟಕ ಡಾ|| ಎ.ವಿ. ಬಾಳಿಗಾ ವಾಣಿಜ್ಯ ಕಾಲೇಜ್ ಕುಮಟಾ

ಹೆಚ್ಚಿನ ಮಾಹಿತಿಗಾಗಿ ಭೇಟಿ ಕೊಡಿ : www.khushiparisara.in
ಇ ಮೇಲ್ : khushiparisara@gmail.com